7073_392045

ಜಿಲ್ಲಾಧಿಕಾರಿಯವರ ಕಛೇರಿ
ದಕ್ಷಿಣ ಕನ್ನಡ, ಮಂಗಳೂರು
10 NOV 2020
OFFICE OF THE
COMMISSIONER

ಕರ್ನಾಟಕ ಸರಕಾರ

ಸಂಖ್ಯೆ: ಕಂಇ/48/ಟಿಆರ್ಎಂ/2020

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:21.10.2020

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ,
ಬೆಂಗಳೂರು.

ಇವರಿಗೆ,

1 ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ.
2 ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಮೈಸೂರು ಜಿಲ್ಲೆ & ಧಾರವಾಡ ಜಿಲ್ಲೆ.
3 ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ,
4 ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ(ಭೂ ಮಂಜೂರಾತಿ & ಭೂ-ಕಂದಾಯ) ಇವರ ಆಪ್ತ ಸಹಾಯಕರು.

ಮಾನ್ಯರೆ,

ವಿಷಯ: ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ)ಅಧಿನಿಯಮ 2016 ಕಲಂ40(1) ಹಾಗೂ ರೇರಾ ನಿಯಮ 25ರಡಿ ದಂಡ/ಪರಿಹಾರದ ಮೊತ್ತವನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡುವ ಕುರಿತ ಸಭೆಯ ನಡವಳಿಗಳು.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ)ಅಧಿನಿಯಮ 2016 ಕಲಂ40(1) ಹಾಗೂ ರೇರಾ ನಿಯಮ 25ರಡಿ ದಂಡ/ಪರಿಹಾರದ ಮೊತ್ತವನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡುವ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:05.10.2020ರಂದು ನಡೆದ ಸಭೆಯ ನಡವಳಿಯನ್ನು ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ತಮ್ಮನಂಬುಗೆಯ,

Kamala Jayaram 21/10/2020.
(ಕಮಲ ಜಯರಾಂ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ-ಕಂದಾಯ)
21/10/2020

3376
13-11-2020

ಮುದ್ದಾಂ/ಅಂಚೆ/ಕೊರಿಯರ್

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:05.10.2020ರಂದು ಮಧ್ಯಾಹ್ನ 4.00 ಗಂಟೆಗೆ ಬಹುಮಹಡಿ ಕಟ್ಟಡ, ಬೆಂಗಳೂರು ಇಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 2016 ಕಲಂ 40(1) ಹಾಗೂ ರೇರಾ ನಿಯಮ 25 ರಡಿ ದಂಡ/ಪರಿಹಾರದ ಮೊತ್ತವನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡುವುದಕ್ಕೆ ಸಂಬಂಧಿಸಿದಂತೆ ನಡೆದ ಸಭೆಯ ನಡವಳಿಗಳು**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಶ್ರೀಮತಿ ಕೆ.ಎಸ್. ಲತಾಕುಮಾರಿ, ಐ.ಎ.ಎಸ್, ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ.
2. ಶ್ರೀಮತಿ ಶ್ರೀರೂಪ, ಕೆ.ಎ.ಎಸ್, ಅಪರ ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ
3. ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಮಂಜೂರಾತಿ ಮತ್ತು ಭೂಕಂದಾಯ)
4. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಕಂದಾಯ)
5. ಡಾ: ಎಂ.ಜಿ. ಶಿವಣ್ಣ, ಕೆ.ಎ.ಎಸ್, ಉಪವಿಭಾಗಾಧಿಕಾರಿ, ಬೆಂಗಳೂರು ದಕ್ಷಿಣ ಉಪವಿಭಾಗ
6. ಶ್ರೀ ಎಂ. ಆನಂದಯ್ಯ, ಕೆ.ಎ.ಎಸ್, ತಹಶೀಲ್ದಾರ್, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
7. ಶ್ರೀ ಹೆಚ್. ಶ್ರೀನಿವಾಸ್, ಕೆ.ಎ.ಎಸ್, ವಿಶೇಷ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು
8. ಶ್ರೀ ಕೆ. ಮಂಜುನಾಥ್, ಕೆ.ಎ.ಎಸ್, ವಿಶೇಷ ತಹಶೀಲ್ದಾರ್, ಯಲಹಂಕ ತಾಲ್ಲೂಕು
9. ಶ್ರೀಮತಿ ಧನಲಕ್ಷ್ಮಿ, ಕೆ.ಎ.ಎಸ್, ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು
10. ಶ್ರೀಮತಿ ಎನ್.ಎಸ್. ಸವಿತ, ಕೆ.ಎ.ಎಸ್, ತಹಶೀಲ್ದಾರ್, ಉಪವಿಭಾಗಾಧಿಕಾರಿಗಳ ಕಛೇರಿ, ಬೆಂಗಳೂರು ಉತ್ತರ ಉಪ ವಿಭಾಗ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಲಾಯಿತು.

ರೇರಾ ಕಾಯ್ದೆ ಮತ್ತು ಭೂಕಂದಾಯ ಬಾಕಿ ವಸೂಲಾತಿಗೆ ಸಂಬಂಧಿಸಿದಂತೆ, ರೇರಾ ಪ್ರಾಧಿಕಾರದಲ್ಲಿ ಯಾವ ರೀತಿ ಕ್ರಮವಹಿಸಲಾಗುತ್ತದೆ ಎಂಬುದರ ಬಗ್ಗೆ ವಿವರಿಸುವಂತೆ ರೇರಾ ಕಾರ್ಯದರ್ಶಿಯವರಿಗೆ ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ರವರು ತಿಳಿಸಿದರು.

ರೇರಾ ಕಾರ್ಯದರ್ಶಿಯವರು ಮಾತನಾಡಿ ಭಾರತ ಸರ್ಕಾರವು ರಿಯಲ್ ಎಸ್ಟೇಟ್ (ನಿಯಂತ್ರಣ & ಅಭಿವೃದ್ಧಿ) ಕಾಯ್ದೆ 2016ನ್ನು ಜಾರಿಗೆ ತಂದಿದ್ದು, ಕರ್ನಾಟಕ ರಾಜ್ಯವು ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ & ಅಭಿವೃದ್ಧಿ) ನಿಯಮಗಳು 2017ನ್ನು ದಿನಾಂಕ 11.7.2017 ರಂದು ಜಾರಿಗೆ ತಂದಿದ್ದು, ಅದರಂತೆ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು ಸ್ಥಾಪನೆಯಾಗಿ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಮುಂದುವರಿದು, ರೇರಾ ಕಾಯ್ದೆ 2016ರ ಕಲಂ 4(1)ರ ಪ್ರಕಾರ ಪ್ರತಿಯೊಬ್ಬ ಅಭಿವೃದ್ಧಿದಾರರು, ಅವರು ಅಭಿವೃದ್ಧಿಪಡಿಸುವ ರಿಯಲ್ ಎಸ್ಟೇಟ್ ಯೋಜನೆಯನ್ನು ರೇರಾ ಪ್ರಾಧಿಕಾರದಲ್ಲಿ ಕಡ್ಡಾಯವಾಗಿ ನೋಂದಾಯಿಸಬೇಕಾಗಿರುತ್ತದೆ. ರೇರಾ ಕಾಯ್ದೆ 2016ರ ಕಲಂ 3(1) ರ ಪ್ರಕಾರ ಅಭಿವೃದ್ಧಿದಾರರು ರೇರಾ ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘನೆ ಮಾಡಿದ ಪ್ರಕರಣಗಳಲ್ಲಿ, ಗ್ರಾಹಕರು/ಖರೀದಿದಾರರು ರೇರಾ ಪ್ರಾಧಿಕಾರದಲ್ಲಿ ದೂರು ದಾಖಲಿಸಿದಂತೆ, ರೇರಾ ಪ್ರಾಧಿಕಾರದ ನ್ಯಾಯ ನಿರ್ಣಯಾಧಿಕಾರಿಗಳು ರೇರಾ ಕಾಯ್ದೆ 2016ರ ಕಲಂ 31ರ ಪ್ರಕಾರ ವಿಚಾರಣೆ ಮಾಡಿ, ಅಭಿವೃದ್ಧಿದಾರರು, ಗ್ರಾಹಕರಿಗೆ ಪರಿಹಾರ ಪಾವತಿಸಲು ವಿಫಲರಾದಂತಹ ಪ್ರಕರಣಗಳನ್ನು ಕಾಯ್ದೆ 2016ರ ಕಲಂ 40(1) ಹಾಗೂ ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ & ಅಭಿವೃದ್ಧಿ) ನಿಯಮಗಳು 2017ರ ನಿಯಮ 25ರ ಪ್ರಕಾರ ದಂಡ/ಪರಿಹಾರ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ, ಎದುರುದಾರರಿಂದ (ಅಭಿವೃದ್ಧಿದಾರರಿಂದ) ವಸೂಲಿ ಮಾಡಲು ಕಾನೂನಾತ್ಮಕವಾಗಿ 60 ದಿನಗಳ ಕಾಲಮಿತಿಯನ್ನು ವಿಧಿಸಿ ತೀರ್ಪು ಹೊರಡಿಸಲಾಗುತ್ತದೆ.

ಸದರಿ ಕಾಲಮಿತಿಯಲ್ಲಿ ಎದರುದಾರರಾದ ಅಭಿವೃದ್ಧಿದಾರರು ಗ್ರಾಹಕರಿಗೆ ದಂಡ/ ಪರಿಹಾರದ ಮೊತ್ತವನ್ನು ಪಾವತಿಸಲು ವಿಫಲರಾದಲ್ಲಿ ದೂರುದಾರರು (ಅರ್ಜಿದಾರರು) ಪುನಃ ಪ್ರಾಧಿಕಾರದ ಮುಂದೆ ಸದರಿ ತೀರ್ಪನ್ನು ಅನುಷ್ಠಾನಗೊಳಿಸಲು ಮನವಿ ಮಾಡಿದ ಪ್ರಕರಣಗಳಲ್ಲಿ ನ್ಯಾಯ ನಿರ್ಣಯಾಧಿಕಾರಿಗಳು ರಿಯಲ್ ಎಸ್ಟೇಟ್ (ನಿಯಂತ್ರಣ & ಅಭಿವೃದ್ಧಿ) ಕಾಯ್ದೆ 2016ರ ಕಲಂ 40(1) ಹಾಗೂ ರೇರಾ ನಿಯಮಗಳು 2017ರ ನಿಯಮ 25 ರಂತೆ ದಂಡ/ ಪರಿಹಾರ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ಅನುಷ್ಠಾನಗೊಳಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ರವಾನಿಸಲು ಆದೇಶಿಸಲಾಗುತ್ತದೆ.

2020ನೇ ಸಾಲಿನ ಸೆಪ್ಟೆಂಬರ್ 15ರ ಅಂತ್ಯಕ್ಕೆ ಒಟ್ಟು 447 ಪ್ರಕರಣಗಳ ಬಾಬ್ತು ಎದುರುದಾರರಿಂದ (ಅಭಿವೃದ್ಧಿದಾರರು) ಫಿರ್ಯಾದುದಾರರಾದ/ ಮನೆ ಖರೀದಿದಾರರಿಗೆ ಪಾವತಿಸಬೇಕಾಗಿರುವ ಒಟ್ಟು ಬಾಕಿ ಮೊತ್ತ ರೂ.185,13,25,616/- (ರೂ ಒಂದು ನೂರ ಎಂಬತ್ತೈದು ಕೋಟಿ ಹದಿಮೂರು ಲಕ್ಷದ ಇಪ್ಪತ್ತೈದು ಸಾವಿರದ ಆರು ನೂರ ಹದಿನಾರು ಮಾತ್ರ) ಗಳಿದ್ದು, ಈ ಪೈಕಿ 5 ಪ್ರಕರಣಗಳಲ್ಲಿ ರೂ.1,66,88,958/- ಗಳನ್ನು ಮಾತ್ರ ರಾಜಿ ಮೂಲಕ ಇತ್ಯರ್ಥಗೊಂಡು ಗ್ರಾಹಕರಿಗೆ ಪರಿಹಾರ ಸಲ್ಲಿಕೆಯಾಗಿದೆ, ಉಳಿಕೆ 442 ಪ್ರಕರಣದಲ್ಲಿ ರೂ.183,46,36,658/- (ರೂ ಒಂದು ನೂರ ಎಂಬತ್ತಮೂರು ಕೋಟಿ ನಲವತ್ತಾರು ಲಕ್ಷ ಮುವತ್ತಾರು ಸಾವಿರದ ಆರು ನೂರ ಐವತ್ತೆಂಟು ಮಾತ್ರ) ವಸೂಲು ಮಾಡಲು ಬಾಕಿ ಇರುತ್ತದೆ. ಆದರೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ವತಿಯಿಂದ ಯಾವುದೇ ಒಂದು ಪ್ರಕರಣವು ವಸೂಲಾಗಿರುವುದಿಲ್ಲ ಎಂಬ ಅಂಶದೊಂದಿಗೆ ಈ ಕೆಳಕಂಡ ಮಾಹಿತಿಯನ್ನು ರೇರಾ ಕಾರ್ಯದರ್ಶಿಯವರು ಸಭೆಗೆ ವಿವರಿಸಿರುತ್ತಾರೆ.

**RERA - Land Revenue Arrears Recovery Cases Details as on 15.09.2020**

| Sl. No | Name of the District | Name of the Taluk | Total RRC Issued | Demand Raised (Rs) | Recovery Warrant Issued from DC to Thasildar | Land Revenue Demand Recovered | | Balance Cases to be Recovery | Balance Demand Amount (Rs) | Notices Issued From Tahasildars | | |
|---|---|---|---|---|---|---|---|---|---|---|---|---|
| | | | | | | Total No. Of Cases | Amount (Rs) | | | Form-37 | Form-40 | Final Notice |
| 1 | D.C B.Urban | DC B.Urban Office (to be issue Recovery Warrant) | 136 | 626308722 | 0 | 0 | 0 | 136 | 626308722 | 0 | 0 | 0 |
| | | Yalahanka | 35 | 86955111 | 35 | 3 | 11846166 | 32 | 75108945 | 27 | 18 | 8 |
| | | Bengaluru North | 182 | 842875306 | 182 | 0 | 0 | 182 | 842875306 | 122 | 46 | 6 |
| | | Bengaluru South | 52 | 161622874 | 52 | 0 | 0 | 52 | 161622874 | 14 | 1 | 1 |
| | | Bengaluru East | 33 | 116710645 | 33 | 2 | 4842792 | 31 | 111867853 | 23 | 10 | 0 |
| | | Anekal | 5 | 8076472 | 5 | 0 | 0 | 5 | 8076472 | 5 | 0 | 0 |
| 2 | D.C Dharwad | Dharwad | 1 | 1080000 | 1 | 0 | 0 | 1 | 1080000 | 1 | 0 | 0 |
| 3 | D.C Mangaluru | Bantwal | 2 | 2052216 | 2 | 0 | 0 | 2 | 2052216 | 1 | 0 | 0 |
| 4 | DC Mysuru | Mysuru | 1 | 5644270 | 1 | 0 | 0 | 1 | 5644270 | 1 | 0 | 0 |
| | | **TOTAL** | **447** | **185,13,25,616** | **311** | **5** | **1,66,88,958** | **442** | **183,46,36,658** | **194** | **75** | **15** |